# ಪೂರ್ವಜನ್ಮದ ಪ್ರೇಮ ಪಲ್ಲವಿ

## ಸಚಿನ್ ಕಡೆಮಡ

### ಉದಯದ 'ಆನಂದ ಭೈರವಿ'ಯ ಅಗ್ನಿ



★ *ಕಾಶಿಯ ಅನುಭವ ಹೇಗಿತ್ತು?*

ನಮ್ಮ ತಂಡದಲ್ಲಿ 25 ಜನ ಇದ್ವಿ. ಎಲ್ಲರೂ ಅಲ್ಲಿನ ಭೀಕರತೆಗೆ ನಲುಗಿ ಹೋದ್ವಿ. ಊಟ ಸರಿಯಾಗುತ್ತಿರಲಿಲ್ಲ. ಬಿಸಿಲಿನ ತಾಪ 45 ಡಿಗ್ರಿ. ಬಿಡುವು ಸಿಕ್ಕಾಗೆಲ್ಲಾ ಸ್ನಾನ ಮಾಡುವುದೇ ಕೆಲಸ. ಎಲ್ಲರ ಆರೋಗ್ಯವೂ ಕೈ ಕೊಡುತ್ತಿತ್ತು. ಆದರೆ ಚಿತ್ರೀಕರಣಕ್ಕೆ ಎಲ್ಲರೂ ಜೀವ ಪಣಕ್ಕಿಟ್ಟು ಶ್ರಮಿಸಿದರು. ಅದ್ಭುತವಾಗಿ ಬಂದಿದೆ. ನಿರ್ದೇಶಕ ಮತ್ತು ಕ್ಯಾಮೆರಾದವರ ಜೋಡಿ ಕೂಡ ಹೇಳಿ ಮಾಡಿಸಿದಂತೆ ಇತ್ತು. ಅಲ್ಲಿಂದ ಇಲ್ಲಿಗೆ ಬರುವ ಹೊತ್ತಿಗೆ 5 ಕೆ.ಜಿ. ತೂಕ ಇಳಿದಿತ್ತು. ಪ್ರತಿಕೂಲ ವಾತಾವರಣವನ್ನು ಹೊರತುಪಡಿಸಿದರೆ ಕೆಲಸ ಚೆನ್ನಾಗಿತ್ತು. ಹಿರಿಯ ಮತ್ತು ಕಿರಿಯ ಕಲಾವಿದರು, ತಂತ್ರಜ್ಞರ ಶ್ರಮ ಸಾರ್ಥಕವಾಗಿದೆ ಎಂದು ನನಗೆ ಅನ್ನಿಸಿದೆ.

★ *ನೀವು ಬೆಳೆದು ಬಂದ ಹಿನ್ನೆಲೆ ಮತ್ತು ನಟನಾಗಿದ್ದು ಹೇಗೆ?*

ನನ್ನ ಮೂಲ ಕೊಡಗು. ಊರು ಪೊನ್ನಂಪೇಟೆ. ವೀರಾಜಪೇಟೆಯಲ್ಲಿ ಪಿಯು ಮುಗಿಸಿ. ಬೆಂಗಳೂರಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಮುಗಿಸಿದೆ. ಅಮ್ಮ ಧರಣಿ ಗೃಹಿಣಿ, ಅಪ್ಪ ಅರ್ಜುನ್ ಕಾಫಿ ವ್ಯಾಪಾರ ಮಾಡುತ್ತಿದ್ದರು. ಈಗ ಅದನ್ನು ಬಿಟ್ಟು ತೋಟ ನೋಡಿಕೊಂಡಿದ್ದಾರೆ.

ಕಾಲೇಜು ದಿನಗಳಿಂದಲೇ ಮಾಡೆಲಿಂಗ್ ಆರಂಭಿಸಿದೆ. ಬಿಡುವಿಲ್ಲದಂತೆ ಕೆಲಸಗಳು ಬರತೊಡಗಿದವು. ಹೀಗಿರುವಾಗಲೇ ಒಂದು ಸಿನಿಮಾದಲ್ಲಿ ನಟಿಸಿದೆ. ಅದು ಮಧ್ಯದಲ್ಲೇ ಸ್ಥಗಿತವಾಯಿತು. ಆಮೇಲೆ 'ಸಿಕ್ಸ್ ಟು ಸಿಕ್ಸ್' ಸಿನಿಮಾದಲ್ಲಿ ಖಳನಾಯಕನ ಪಾತ್ರ ನಿರ್ಹಿಸಿದ್ದೇನೆ. ಹೀಗಿರುವಾಗ 'ಅಗ್ನಿ' ಪಾತ್ರಕ್ಕೆ ಅವಕಾಶ ಸಿಕ್ಕಿದೆ. ಇದಾದಮೇಲೆ ಮತ್ತೆ ಸಿನಿಮಾಕ್ಕೆ ಮರಳುತ್ತೇನೆ. ಪಾತ್ರ ಯಾವುದಾದರೂ ತೊಂದರೆ ಇಲ್ಲ. ಅದಕ್ಕೆ ನ್ಯಾಯ ಕೊಡವುದಷ್ಟೇ ನನ್ನ ಕೆಲಸ ಎಂದುಕೊಂಡಿದ್ದೇನೆ.

★ *ನಿಮ್ಮ ಬೇರೆ ಹವ್ಯಾಸಗಳು ಏನು?*

ಕ್ರಿಡೆ ನನ್ನ ಮೆಚ್ಚಿನ ಹವ್ಯಾಸ. ಎಲ್ಲಾ ರೀತಿಯ ಆಟಗಳನ್ನು ಆಡುತ್ತೇನೆ. ಕಲಿಯುವ ಬಗ್ಗೆ ತೀವ್ರ ಆಸಕ್ತಿ ಇರುವುದರಿಂದ ಹೊಸ ಆಟವನ್ನೂ ಬಹುಬೇಗ ಕಲಿಯುತ್ತೇನೆ. ಅತ್ಯಂತ ಪ್ರೀತಿ ಇರುವುದು ಬಾಸ್ಕೆಟ್ ಬಾಲ್, ಕ್ರಿಕೆಟ್ ಮೇಲೆ. ಈಚೆಗೆ ಓದುವ ಹವ್ಯಾಸ ಬೆಳೆಸಿಕೊಂಡಿದ್ದೇನೆ. ವಿಶೇಷವಾಗಿ ಕನ್ನಡ ಪತ್ರಿಕೆ– ಸಾಹಿತ್ಯ ಓದುವುದರಿಂದ ಭಾಷಾ ಸ್ಪಷ್ಟತೆ ವೃದ್ಧಿಯಾಗುತ್ತಿದೆ.

★ *ಅಘೋರಿಯದು ಲೌಕಿಕ ಧ್ಯಾನವೋ ಅಥವಾ ಪಾರಮಾರ್ಥಿಕವೋ?*

ಪೂರ್ವ ಜನ್ಮದ ಪ್ರೇಮ ಪಲ್ಲವಿ ಇಲ್ಲೂ ಅಂಕುರವಾಗುತ್ತದೆ. ತಂದೆಯ ಅಸ್ಥಿ ವಿಸರ್ಜನೆಗೆ ಬಂದ ಕಥಾನಾಯಕಿಗೆ ಬಂಧುಗಳ ಕಾಟ. ತನಗಿರುವ ಜೀವಕಂಟಕವನ್ನು ಅರಿತು ಅದರಿಂದ ಬಚಾವ್ ಆಗಲು ಆಕೆ ಕಾಶಿಯಲ್ಲೇ ನೆಲೆಗೊಳ್ಳುತ್ತಾಳೆ. ಹೀಗೆ ಕಥೆ ಮುಂದುವರಿಯುತ್ತದೆ.

★ *ಹುಡುಗಿಯರ ಮೆಚ್ಚಿನ ಹುಡುಗನಂತೆ ಹೌದಾ?*

ಪ್ರೀತಿ ಗೀತಿ ಅಂತ ಮರ ಸುತ್ತುವ ಕೆಲಸ ಸದ್ಯಕ್ಕಿಲ್ಲ. ಏನಿದ್ದರೂ ಈಗ ನೆಲೆ ನಿಲ್ಲುವ ಗುರಿ. ಸ್ವಲ್ಪ ಫ್ಲರ್ಟ್ ಮಾಡುತ್ತೇನೆ. ಅದಕ್ಕೆ ಹೊರತಾಗಿ ಗರ್ಲ್ ಫ್ರೆಂಡ್ ಅಥವಾ ಪ್ರೇಯಸಿ ಅಂತ ಯಾರೂ ಇಲ್ಲ.

■ ರಾಗು